

### ಹಾಲು

ಹಾಲಿನಾತ: ನಾಳೆಯಿಂದ ನಿಮಗೆ ಹಾಲು ಇಲ್ಲಮ್ಮಾ

ಶಾಂತಮ್ಮ: ಯಾಕೆ?

ಹಾಲಿನಾತ: ಸೌಂದರ್ಯ ಕೆಡುತ್ತೆ ಅಂತಾನೋ ಏನೊ... ಆಕಳು ಹಾಲು ಕೊಡೋದನ್ನೇ ನಿಲ್ಲಿಸಿಬಿಟ್ಟಿದೆ!

★★★

### ಫ್ರೀ

ಗಿರಾಕಿ: ಈಗ ಎಲ್ಲೇ ಏನೇ ಕೊಂಡರೂ ಏನಾದರೂ ಫ್ರೀ ಕೊಡ್ತಾರೆ. ನಿಮ್ಮ ಹೋಟೇಲಿನಲ್ಲಿ ತಿಂಡಿ ತಿಂದರೆ ಏನು ಫ್ರೀ ಕೊಡ್ತೀರಿ?

ಮಾಣಿ: ಕೆಮ್ಮು!

★★★

### ಸಿನೆಮಾ

ಗುಂಡ: ಇಂದು ಬಿಡುಗಡೆಯಾದ ಸಿನೆಮಾ ಹೇಗಿದೆ?

ಪುಂಡ: ನಮ್ಮ ನಮ್ಮ ಅಕ್ಕ- ತಂಗಿಯರ ಜತೆ ಕುಳಿತು ನೋಡುವ ಹಾಗೇ ಇಲ್ಲ.

ಗುಂಡ: ಅಷ್ಟು ಕೆಟ್ಟದಾಗಿದೆಯಾ?

ಪುಂಡ: ಹಾಗೇನಿಲ್ಲ, ಪಕ್ಕದ ಮನೆಯ ಅಕ್ಕ- ತಂಗಿಯರ ಜತೆ ಕುಳಿತು ನೋಡಬಹುದು!

★★★

### ಬೆಳ್ಳಿ ಗೆಜ್ಜೆ

ರಾಧಕ್ಕ: ಯಾಕ್ರಿ ಶಾಂತಮ್ಮನವರೆ, ಕಾಲಿಗೆ ಬೆಳ್ಳಿ ಗೆಜ್ಜೆ ಧರಿಸುತ್ತಿದ್ದರಲ್ಲ. ಈಗ ಯಾಕೆ ಧರಿಸುವುದನ್ನು ಬಿಟ್ಟರಿ?

ಶಾಂತಮ್ಮ: ಅಯ್ಯೋ! ಅದು ನನ್ನ ಗಂಡ ಪ್ರೀತಿಯಿಂದ ತಂದು ಕೊಟ್ಟದ್ದು ಅಂದು ಕೊಂಡಿದ್ದೆ. ನೋಡಿದರೆ ನನ್ನ ಗಂಡ ಪಕ್ಕದ ಮನೆಯವಳ ಜತೆ ಕದ್ದು ಮಾತನಾಡುವಾಗ ನಾನು ದೂರದಿಂದ ಬರುವುದು ನನ್ನ ಗೆಜ್ಜೆ ಶಬ್ದದಿಂದ ಗೊತ್ತಾಗಲಿ ಎಂದು ತಂದು ಕೊಟ್ಟಿದ್ದಾರೆ! ಅದನ್ನು ಕಿತ್ತು ಎಸೆದು ಬಂದೆ.

★★★

### ಊಟ

ರಾಧಕ್ಕ: ಗಂಗಮ್ಮನವರೆ, ನಿಮ್ಮ ಯಜಮಾನರಿಗೆ ರಾತ್ರಿ ಎಷ್ಟು ಗಂಟೆಗೆ ಊಟ ಬಡಿಸುತ್ತೀರಿ?

ಗಂಗಮ್ಮ: ಗಂಟೆ ಪಂಟೆ ಏನಿಲ್ಲರೀ. ಧಾರಾವಾಹಿಯ ಮಧ್ಯೆ ಜಾಹೀರಾತು ಆರಂಭವಾದ ಕೂಡಲೆ ಅವರಿಗೆ ಹಸಿವಾಗಲಿ, ಆಗದಿರಲಿ ಬಡಿಸಿ ಬಿಡ್ತೇನೆ!

★★★

### ಪರಿಣಾಮ

ಗುಂಡ: ಕಳೆದ ಎರಡು ವರುಷದಿಂದ ನನ್ನ ಮಗ ಸತತವಾಗಿ ಫೇಲ್ ಆಗ್ತಾ ಇದ್ದಾನ್ರಿ..

ಗೆಳೆಯ: ಈ ಸಾರಿಯೂ ಪರೀಕ್ಷೆಗೆ ಕುಳಿತಿದ್ದನಲ್ಲ. ಪರಿಣಾಮ ಬಂದಿದೆಯಂತೆ ಏನಾಯ್ತು?

ಗುಂಡ: ಈ ಸಾರಿ ಹ್ಯಾಟ್ರಿಕ್ ಆಯ್ತುರೀ!

(ಸಂಗ್ರಹ): **ದೇವಿದಾಸ ಸುವರ್ಣ, ಅಂಕೋಲಾ**

---

ತಾಯಿ: (ಮಕ್ಕಳಿಗೆ) ನನ್ನ ಮಾತು ಕೇಳುವ, ನಾನು ಹೇಳುವ ಕೆಲಸ ಮಾಡುವವರಿಗೆ ಭಾರಿ ಬಹುಮಾನ ಕೊಡುವೆ.

ಮಗ: ಹಾಗಾದರೆ ಬಹುಮಾನ ಅಪ್ಪನಿಗೆ ಕೊಟ್ಟುಬಿಡಮ್ಮ.

★★★



ತಂದೆ: ಗಣಿತ ವಿಷಯದಾಗ ಯಾಕೆ ಫೇಲಾದೆ ಮಗನೆ?

ಮಗ: ಗಣಿತ ಮಾಸ್ತರ ಒಂದು ದಿನ 4+4=8 ಅಂತಾ ಹೇಳಿದರು. ಮರು ದಿನ 5+3=8 ಅಂತಾ, ಮಾರನೇ ದಿನ 4X2=8 ಅಂತಾ ದಿನಾ ಒಂದೊಂದು ಹೇಳಿ ಕನ್‌ಫ್ಯೂಷ್ ಮಾಡಿದ್ದರು. ಅದಕ್ಕೆ ನಪಾಸಾದೆ.

(ಸಂಗ್ರಹ): **ಹುಡೇದಗಡ್ಡಿ, ಪುಣೆ**

### ಒಂಟಿ

ಇಬ್ಬರ ನಡುವೆ ಸಂಭಾಷಣೆ

'ನೀನೇಕೆ ಒಂಟಿಯಾಗಿದ್ದೀಯಾ?'

'ನನಗೆ ಮದುವೆಯಾಗುವ ಹೆಣ್ಣು ಸಿಗಲಿಲ್ಲ, ಅದಕ್ಕೆ! ಅದು ಸರಿ, ನೀನೇಕೆ ಒಂಟಿಯಾಗಿದ್ದೀಯ?'

'ನಾನು ಮದುವೆ ಆದೆ. ಆಮೇಲೆ ಒಂಟಿಯಾಗಿದ್ದೀನಿ'

★★★

### ಕೋಟಿ ಸಿಕ್ಕರೆ....

ಹಿರಿಯರೊಬ್ಬರು ತರುಣನೊಬ್ಬನನ್ನು ಕುರಿತು

'ನಿನಗೆ ಸಾವಿರ ರೂಪಾಯಿ ಸಿಕ್ಕರೆ ಏನು ಮಾಡುತ್ತೀಯ?'

'ಗೆಳೆಯರೊಂದಿಗೆ ಹೋಟೆಲ್‌ಗೆ ಹೋಗಿ ಇಷ್ಟ ಬಂದದ್ದನ್ನು ತಿನ್ನುತ್ತೇನೆ'

'ಲಕ್ಷ ಸಿಕ್ಕರೆ?'

'ಗೆಳೆಯರು, ಬಂಧುಬಳಗದೊಂದಿಗೆ ಪುಷ್ಕಳ ಭೋಜನ ಮಾಡಿ ಉಡುಗೊರೆ ಕೊಡುತ್ತೇನೆ'.

'ಕೋಟಿ ಸಿಕ್ಕರೆ?'

'ಎಲ್ಲರಿಂದ ದೂರವಿರುತ್ತೇನೆ'

(ಸಂಗ್ರಹ): **ಎಚ್.ಆರ್. ದೊರೆಸ್ವಾಮಿ, ಮೈಸೂರು**